**2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.**: 253/2023

**ಸಾಕ್ಷಿಯನ್ನು ದಿನಾಂಕ 5.8.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಮೇಶ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ನಿಂಗಯ್ಯ | ಸಿ.ಡಬ್ಲ್ಯೂ-4 |
| ವಯಸ್ಸು | : | 53 | |
| ಉದ್ಯೋಗ | : | ಪೇಂಟರ್ | |
| ವಾಸ ಸ್ಥಳ | : | ಗಣಿಗರಹುಂಡಿ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನಾನು ನೋಡುತ್ತಿರುವ ನೋಟಿಸ್‌ನಲ್ಲಿರುವ ಸಹಿ ನನ್ನದಿರುತ್ತದೆ. ಸದರಿ ನೋಟಿಸನ್ನು ನಿಪಿ1 ಎಂದು, ಸಹಿಯನ್ನು ನಿಪಿ1ಎ ಎಂದು ಗುರುತಿಸಿದೆ. ನಮ್ಮ ಗ್ರಾಮದ ಹರ್ಸಿತ ಎಂಬ ಹುಡುಗಿ ಮರಣ ಹೊಂದಿದಾಗ ಅವಳ ಶವ ಮಹಜರ್ ಮಾಡುವಾಗ ನಿಪಿ1 ನೋಟಿಸನ್ನು ದಿನಾಂಕ 2.7.2023 ರಂದು ನನಗೆ ನೀಡಿದ್ದರು. ಆ ನೋಟಿಸ್ ನೀಡಿದ ಬಳಿಕ ಅದೇ ದಿನ ಮೈಸೂರು ಮೆಡಿಕಲ್ ಕಾಲೇಜಿನ ಶವಗಾರಕ್ಕೆ ಕರೆದುಕೊಂಡು ಹೋಗಿದ್ದರು. ಬೆಳಿಗ್ಗೆ 10 ರಿಂದ 1 ರವರೆಗೆ ನಾನು ಶವಗಾರದ ಬಳಿ ಇದ್ದೆ. ಆ ಕಾಲಕ್ಕೆ ನನ್ನೊಂದಿಗೆ ರಾಜು, ಪದ್ಮ, ಮೃತ ಹರ್ಸಿತಳ ತಾಯಿ ಮತ್ತು ಸುರೇಶ ಎಂಬುವವರು ಹಾಜರಿದ್ದರು. ನಾನು ನೋಡಿದಾಗ ಮೃತಳ ಶವದ ಕಣ್ಣು ತೆರೆದಿತ್ತು, ಬಾಯಿ ಸ್ವಲ್ಪ ತೆರೆದಿತ್ತು ಹಾಗೂ ಹಲ್ಲು ಕಾಣುತ್ತಿತು. ಎಡಗಾಲು ಸ್ವಲ್ಪ ಮಡಚಿದಂತಿತ್ತು. ಶವದ ಮೇಲೆ ನೇರಳೆ ಬಣ್ಣದ ಡ್ರೆಸ್ ಮತ್ತು ವೇಲ್ ಇತ್ತು. ಶಿವು

ಎಂಬುವವನು ತನಗೆ ಮದುವೆಯಾಗಿ ಮಕ್ಕಳಿದ್ದರೂ ಸಹ ಹರ್ಷಿತಳನ್ನು ಪ್ರೀತಿ ಮಾಡು ಎಂದು ತೊಂದರೆ ನೀಡುತ್ತಿದ್ದರಿಂದ ಅವಳು ಕಾಳು ಕೆಡಬಾರದೆಂದು ಹಾಕುವ ಮಾತ್ರೆಗಳನ್ನು ಸೇವಿಸಿ ಮರಣ ಹೊಂದಿದ್ದಾಳೆ ಎಂದು ಆ ಕಾಲಕ್ಕೆ ಗೊತ್ತಾಯಿತು. ಆ ಬಗ್ಗೆ ಅವರ ತಂದೆ ತಾಯಿ ಹೇಳಿದರು. ಈಗ ನಾನು ನೋಡುತ್ತಿರುವ ದಾಖಲೆ ಆ ಕಾಲಕ್ಕೆ ಮಾಡಿದ ಶವ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ2 ಎಂದು, ಸಹಿಯನ್ನು ನಿಪಿ2 ಎ ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಫೋಟೋಗಳು ಮಹಜರ್ ಕಾಲಕ್ಕೆ ತೆಗೆದ ಫೋಟೋಗಳಿವೆ. ಸದರಿ ಫೋಟೋಗಳನ್ನು ನಿಪಿ3 ರಿಂದ ನಿಪಿ5 ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಬಟ್ಟೆ ತುಂಡುಗಳು ಮೃತ ಹರ್ಷಿತಳ ಶವದ ಮೈ ಮೇಲಿದ್ದ ಡ್ರೆಸ್ ತುಂಡುಗಳಿವೆ. ಅವುಗಳನ್ನು ಮಹಜರ್ ಕಾಲಕ್ಕೆ ತುಂಡು ಮಾಡಿದ್ದರು. ಸದರಿ ಬಟ್ಟೆ ತುಂಡುಗಳನ್ನು ಒಟ್ಟಿಗೆ ಎಂಓ 1 ಎಂದು ಗುರುತಿಸಿದೆ. (ಈ ವೇಳೆಗೆ ಸೀಲ್ ಮಾಡಿದ ಪ್ಯಾಕೆಟನ್ನು ತೆರೆದು ಸಾಕ್ಷಿದಾರರಿಗೆ ತೋರಿಸಲಾಗಿದೆ)

ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದ್ದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು